ಮಸೀದಿ ಮತ್ತು ಖಬರ ಸ್ಥಾನಗಳ ರಕ್ಷಣೆ.

51(524)

ಶ್ರೀ ಕರಿಯಣ್ಣ (ಹೊಳೆ ಹೊನ್ನೂರು): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗ್ರಾಮಾಂತರ ಮಸೀದಿಗಳ ಅಭಿವೃದ್ಧಿ ಹಾಗೂ ಖಬರಸ್ಥಾನಗಳ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಕೈಗೊಂಡಿರುವ ಕ್ರಮವೇನು?

2) ಮುಸ್ಲಿಂ ಜನಾಂಗಕ್ಕೆ ಶಾದಿಮಹಲ್ ಕಟ್ಟಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

3) ಇಲ್ಲದಿದ್ದಲ್ಲಿ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಎ.ಎಮ್.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

1) ಕರ್ನಾಟಕ ಸರ್ಕಾರದಿಂದ ವಕ್ಫ್ ನೋಂದಾಯಿತ ಸಂಸ್ಥೆಗಳು ಅಂದರೆ ಮಸೀದಿ, ಮದರಸ ಮತ್ತು ಖಬರಸ್ಥಾನಗಳ ಕಟ್ಟಡ, ದುರಸ್ತಿ ಮತ್ತು ಅಭಿವೃದ್ಧಿಗಾಗಿ ಗ್ರಾಂಟ್-ಇನ್-ಏಡ್ ರೂಪದಲ್ಲಿ ಸಹಾಯಧನವನ್ನು ಪ್ರತಿ ವರ್ಷ ಮಂಜೂರು ಮಾಡಲಾಗುತ್ತದೆ.

2) ಇಲ್ಲ.

3) ಉದ್ಭವಿಸುವುದಿಲ್ಲ.

ವಾಯುಮಾಲಿನ್ಯ ಮತ್ತು ಜಲಮಾಲಿನ್ಯ.

52(525)

ಶ್ರೀ ಸಿ.ಎಂ.ಲಿಂಗಪ್ಪ, (ರಾಮನಗರ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೈಗಾರಿಕೆಗಳಿಂದ ವಾಯುಮಾಲಿನ್ಯ ಮತ್ತು ಜಲ ಮಾಲಿನ್ಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಮಾಲಿನ್ಯಗಳಿಂದ ನಾಗರೀಕರ ಹಾಗೂ ಪಶು ಪ್ರಾಣಿಗಳ ಆರೋಗ್ಯದ

ಮೇಲೆ ದುಷ್ಪರಿಣಾಮ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಮಾಲಿನ್ಯಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸರ್ಕಾರ ಉದ್ದೇಶಿಸಿದೆಯೇ?

ಈ) ಎಷ್ಟು ಕಾಲಾವಧಿಯಲ್ಲಿ ಈ ಮಾಲಿನ್ಯವನ್ನು ತಡೆಗಟ್ಟಲಾಗುವುದು?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ) ಹೌದು.

ಇ) ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬರುವ ದೂರುಗಳನ್ನು ಪರೀಪೀಕ್ಷಣೆ ಹಾಗೂ ತನಿಖೆ ಮಾಡಿ ಅಗತ್ಯ ಕ್ರಮಗಳನ್ನು ಜರುಗಿಸುತ್ತಿದೆ. ಇದರಲ್ಲಿ ಉದ್ದಿಮೆಗಳನ್ನು ಸ್ಥಳಾಂತರಿಸುವ, ಮುಚ್ಚುವ, ಮೊಕ್ಕದಮೆಗಳನ್ನು ಹೂಡುವ ಕ್ರಮಗಳು ಸೇರಿರುತ್ತವೆ. ಮಂಡಳಿಯು ಇಂತಹ ದೂರುಗಳನ್ನು ಶೀಘ್ರವಾಗಿ ಪರಿಶೀಲಿಸಿ ವಿಲೇವಾರಿ ಮಾಡಲು ಪ್ರತ್ಯೇಕ ದೂರು ವಿಭಾಗವನ್ನು ಸ್ಥಾಪಿಸಿದೆ.

ಈ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ, ವಾಯು ಹಾಗೂ ಪರಿಸರ ಕಾಯ್ದೆಗಳ ಅಡಿಯಲ್ಲಿರುವಂತೆ ಮಾಲಿನ್ಯ ಕಾರಗಳನ್ನು ನಿಯಂತ್ರಿಸಲು ಪರಿಪೀಕ್ಷಣೆ ಕಾಯ್ದೆಯ ಪ್ರಕಾರ ಮಾದರಿಗಳ ಸಂಗ್ರಹಣೆ ಮತ್ತು ವಿಶ್ಲೇಷಣೆ ಮಾಡುತ್ತಿದೆ. ಇದು ಒಂದು ನಿರಂತರ ಕಾರ್ಯವಾಗಿರುತ್ತದೆ.

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ತಿರುವುಗಳು

53(526)

ಶ್ರೀ ಸಿ.ಎಂ.ಲಿಂಗಪ್ಪ(ರಾಮನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅನೇಕ ತಿರುವುಗಳಿಂದ ಕೂಡಿರುವ ಮೈಸೂರು ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಅಪಘಾತಗಳಿಗೆ ಅವಕಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ವಾಹನಗಳ ಸಂಚಾರ ತೀವ್ರವಾಗಿ ಹೆಚ್ಚಾಗಿರುವುದರಿಂದ ಈ ರಸ್ತೆಯನ್ನು ಹೆಚ್ಚು